# ಆದದ್ದೆಲ್ಲ ಒಳಿತೇ ಆಯಿತು

1. Ref.: Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** In wordings, there are certain differences with that of the singer and each of the above books. Differences in Ref.1 are marked in asterik (*) marks, Ref. 2 are marked with colour variation and yellow highlights are as per the singer.
4. **Note:** The Ankita are different in both the books. We have considered book in Ref.1 as standard and taken that Ankita for listing.

ರಾಗ: ಪೂರ್ವಿ ತಾಳ: ಆದಿ

ಆದದ್ದೆಲ್ಲ ಒಳಿತೇ ಆಯಿತು ನಮ್ಮ
ಶ್ರೀಧರನ (ಸೇವೆಗೆ) ಸೇವೆಯ ಮಾಡಲು
ಸಾಧನ ಸಂಪತ್ತಾಯಿತು ॥ ಪ ॥

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ (ಮಾಚಿ) (ಬಾಗಿ) ತಗ್ಗಿಸಿ* ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರ ವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ ॥ ೧ ॥

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ
(ಭೂಪತಿಯಂತೆ ಗರ್ವಿಸುತ್ತಿದ್ದೆ) (ಭೂಪತಿಯೆಂದು ಗರ್ವಿಸುತ್ತಿದ್ದೆ) ಭೂಪತಿಯಂತೆ ನಾಚುತಲಿದ್ದೆ*
(ಆ ಪತ್ನೀ ಕುಲ ಸಾವಿರವಾಗಲಿ) ಆ ಪತ್ನಿಯು ತಾ ಪ್ರೀತಿಯಿಂದಲಿ*
ಗೋಪಾಳ ಬುಟ್ಟಿಯ ಹಿಡಿಸಿದಳಯ್ಯ ॥ ೨ ॥

ತುಳಸೀ ಮಾಲೆಯ ಹಾಕುವುದಕ್ಕೆ
(ಅರಸನಾಗಿ ನಾಚುತಲಿದ್ದೆ) (ಅರಸನೆಂದು ತಿರುಗುತಲಿದ್ದೆ) ಅಲಸಿಕೊಂಡು ನಡೆಯುತಲಿದ್ದೆ*

(ಸರಸಿಜಾಕ್ಷ ನಮ್ಮ ಪುರಂದರ ವಿಠಲನು) ಜಲಜಾಕ್ಷಿಯು ಶ್ರೀ ಪುರಂದರ ವಿಠಲನ*

(ತುಳಸೀ ಮಾಲೆ ಹಾಕಿದನಯ್ಯ) (ತುಳಸೀ ಮಾಲೆ ಹಾಕಿಸಿದನು) ತುಳಸೀ ಮಾಲೆಯ ಹಾಕಿಸಿದಳು* || ೩ ||

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಇದು ಬಹುಶಃ ಪುರಂದರ ದಾಸರ ಜೀವನಕ್ಕೆ ಸಂಬಂಧಿಸಿದ ಒಂದು ಪದ ಎಂಬ ಪ್ರತೀತಿಯಿದೆ. ವ್ಯಕ್ತಿಯ ಆಂತರಿಕ ವಿಕಾಸಕ್ಕೆ ಪತ್ನಿ ಹೇಗೆ ಸಹಾಯಕಳಾಗಬಲ್ಲಳು ಎಂಬ ವಿವರಣೆ ಇಲ್ಲಿದೆ. ಈ ಪದಕ್ಕೆ ಹಿನ್ನೆಲೆಯಾಗಿ 'ಮುತ್ತಿನ ಮೂಗುತಿ' ಎಂದು ಪ್ರಸಿದ್ಧವಾಗಿರುವ ಪುರಂದರ ದಾಸರ ಜೀವನದ ಬಗ್ಗೆ ಇರುವ ಐತಿಹ್ಯವೊಂದನ್ನು ನೆನಪಿಸಿಕೊಳ್ಳಬಹುದು.

ಪುರಂದರ ದಾಸರ ಬದುಕಿನಲ್ಲಿ ಒಂದು ಮಹತ್ವದ ತಿರುವಿನ ಘಟನೆ ನಡೆದಿರಬೇಕು, ಪುರಂದರ ದಾಸರಿಗೆ ಮೊದಲಲ್ಲಿ ಅದು ಪಥ್ಯವಾಗದೆ ಇದ್ದರೂ ಪರಿಣಾಮದಲ್ಲಿ ಅದರಿಂದ ಹಿತವೇ ಆಯಿತು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಅವರ ಪತ್ನಿಯ ಆಧ್ಯಾತ್ಮಿಕ ಪ್ರವೃತ್ತಿ ಇವರು ಹರಿದಾಸರಾಗಲು ಮೂಲ ಕಾರಣವೆಂದು ತೋರುತ್ತದೆ. ಅವರ ಪೂರ್ವ ಜೀವನದ ರೀತಿಯ ಸೂಚನೆಗಳೂ ಈ ಪದದಲ್ಲಿ ಕಾಣಿಸಿಕೊಳ್ಳುತ್ತವೆ. ಮೊದಲಿನ ಪುರಂದರರು ತುಂಬ ಶ್ರೀಮಂತರಾಗಿದ್ದು, ಅಧಿಕಾರದಲ್ಲಿ ಮೆರೆದು ಹರಿದಾಸರನ್ನು ಸ್ವಲ್ಪ ಹೀನಾಯದಿಂದಲೇ ನೋಡುತ್ತಿದ್ದರೆಂದು ಊಹಿಸಿಕೊಳ್ಳಬಹುದು. ತಮ್ಮನ್ನು ಇಂಥದೊಂದು ಹೊಸ ತತ್ತ್ವಲೋಕಕ್ಕೆ ಎಳೆದೊಯ್ದ ಹೆಂಡತಿಯನ್ನು ಪುರಂದರ ದಾಸರು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಅಲ್ಲದೆ ಈ ಪದದಲ್ಲಿ ಆ ಕಾಲದ ಹರಿದಾಸರ ವೇಷ ಭೂಷಣಗಳ ಅವರ ಬಳಕೆಯ ಸಾಮಗ್ರಿಗಳ ಉಲ್ಲೇಖವಿದೆ.

**ದಂಡಿಗೆ ಬೆತ್ತ** – ನಡೆದಾಡುವಾಗ ನುಡಿಸಲು ಅನುಕೂಲವಾಗುವಂತೆ ಹೆಗಲಿನಿಂದ ಇಳಿಬೀಳಬಹುದಾದ ಒಂದು ತಂತೀವಾದ್ಯ: ಸಣ್ಣ ತಂಬೂರಿ

**ಗೋಪಾಳ ಬುಟ್ಟಿ** – ಹರಿದಾಸರು ಹೆಗಲಿಗೇರಿಸಿಕೊಂಡು, ಉಪಾದಾನದಿಂದ ಪಡೆಯುತ್ತಿದ್ದ ದವಸಧಾನ್ಯಗಳನ್ನು ಹಾಕಿಕೊಳ್ಳುತ್ತಿದ್ದ ಬಿದಿರಿನ ಅಥವಾ ಯಾವುದೇ ಲೋಹದ ಬುಟ್ಟಿ: ಪಾತ್ರೆ.

**ತುಳಸೀಮಾಲೆ** – ಭಾಗವತರಿಗೂ ಹರಿದಾಸರಿಗೂ ದೀಕ್ಷೆ ದೊರೆತಾಗ ಗುರುವಿನಿಂದ ಹಾಕಲ್ಪಡುವ ಕಂಠಮಾಲೆ; ಹರಿಸೇವೆಗಾಗಿ ಬದುಕು ಮುಡುಪು ಎಂಬ ಸಂಕೇತ.

**Classification:** Keerthane, Mundige

**Ankita:** purandara vittala

**Location:** na

**Category:** Haridasa Deekshe, Jeevana Darshana, Jeevana Anubhava,

**Group Words:** sridhara, sadhana, patni, tulasi, Gopala, arasa, Vishnu, butti,

**Explanation / Vyakhyana:** Dr. Vijendra Desai

**Pravachana:** NA